

# ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.) ಒಂದು ಪಕ್ಷಿನೋಟ

**ಎಂ.ಪಿ.ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)ವು ಪ್ರಸ್ತುತ ಬನಶಂಕರಿ 3ನೇ ಹಂತ, ಬೆಂಗಳೂರು, ಇಲ್ಲಿ ಕೆಲಸ ನಿರ್ವಹಿಸುತ್ತಿದೆ. ಈ ಹಿಂದೆ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ.) ಯ ಒಂದು ಭಾಗವಾಗಿದ್ದ ಕರ್ನಾಟಕ ಪಠ್ಯಪುಸ್ತಕ ನಿರ್ದೇಶನಾಲಯವು ದಿನಾಂಕ: 01-04-2006 ರಂದು ಕರ್ನಾಟಕ ಪಠ್ಯಪುಸ್ತಕ ಸಂಘ ಎಂಬ ಪ್ರತ್ಯೇಕ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯ ಸಂರಚನೆಯು ಕೆಳಕಂಡಂತಿದೆ.

ಸನ್ಮಾನ್ಯ ಶಿಕ್ಷಣ ಸಚಿವರು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
↓
ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
↓
ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
↓
ವ್ಯವಸ್ಥಾಪಕ ನಿರ್ದೇಶಕರು
↓
ಉಪನಿರ್ದೇಶಕರು
↓

- ಆಡಳಿತ ವಿಭಾಗ
  - ಸಹಾಯಕ ನಿರ್ದೇಶಕರು (1)
    - ಅಧೀಕ್ಷಕರು (ಆಡಳಿತ) (3)
    - ವಿಷಯ ನಿರ್ವಾಹಕರು (5)
    - ಡಿ. ದರ್ಜೆ ನೌಕರರು (2)
- ಶೈಕ್ಷಣಿಕ ವಿಭಾಗ
  - ಹಿ.ಸ.ನಿ. (5)
  - ಸ.ನಿ. (4)
  - ತಾಂತ್ರಿಕ ಸಹಾಯಕರು (3)
- ಲೆಕ್ಕ ಶಾಖೆ
  - ಲೆಕ್ಕಾಧಿಕಾರಿ (ಎಸ್.ಎ.ಡಿ.) (1)
    - ಅಧೀಕ್ಷಕರು (3)
    - ಲೆಕ್ಕ ಸಹಾಯಕರು (2)

### ಕರ್ನಾಟಕ ಪಠ್ಯಪುಸ್ತಕ ಸಂಘದ ಪ್ರಮುಖ ಕಾರ್ಯಗಳು

❖ ರಾಜ್ಯ ಪಠ್ಯಕ್ರಮದ 1 ರಿಂದ 10ನೇ ತರಗತಿಯ ಪಠ್ಯಪುಸ್ತಕಗಳ ರಚನೆ/ಪರಿಷ್ಕರಣೆ, ಮುದ್ರಣ ಹಾಗೂ ಸರಬರಾಜು.

❖ 4 ರಿಂದ 9ನೇ ತರಗತಿಯ ಅಭ್ಯಾಸ ಪುಸ್ತಕ, 1 ರಿಂದ 12ನೇ ತರಗತಿಯ ದಿನಚರಿ ಮತ್ತು 1 ರಿಂದ 3ನೇ ತರಗತಿಯ ನಲಿ-ಕಲಿ ಕಾರ್ಡುಗಳ ಮುದ್ರಣ ಮತ್ತು ಸರಬರಾಜು.

❖ ರಾಜ್ಯದ 74 ಆದರ್ಶ ವಿದ್ಯಾಲಯಗಳಿಗೆ ಪಠ್ಯಪುಸ್ತಕ ಮತ್ತು ಅಭ್ಯಾಸ ಪುಸ್ತಕಗಳ ಮುದ್ರಣ ಮತ್ತು ಸರಬರಾಜು.

❖ ಸಂಗೀತ, ನೃತ್ಯ, ತಾಳವಾದ್ಯ, ಯಕ್ಷಗಾನ, ಚಿತ್ರಕಲೆ ಮತ್ತು ವೃತ್ತಿಶಿಕ್ಷಣ ವಿಷಯಗಳಿಗೆ ಸಂಬಂಧಿಸಿದಂತೆ ಪುಸ್ತಕಗಳ ರಚನೆ/ಪರಿಷ್ಕರಣೆ, ಮುದ್ರಣ ಹಾಗೂ ಸರಬರಾಜು

❖ ವಿಶೇಷ ಚೇತನ (ಭಾಗಶಃ ಅಂಧ) ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ ವಿಷಯಗಳಿಗೆ ಬದಲಾಗಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಪಠ್ಯಪುಸ್ತಕಗಳ ರಚನೆ / ಪರಿಷ್ಕರಣೆ, ಮುದ್ರಣ ಹಾಗೂ ಸರಬರಾಜು.

❖ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಚೌಕಟ್ಟಿಗೆ (NSQF) ಸಂಬಂಧಿಸಿದ ಪಠ್ಯಪುಸ್ತಕಗಳು, ಮದರಸಾ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಉರ್ದು



ಹಾಗೂ ಅರೇಬಿಕ್ ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜು.

❖ ಪದವಿಪೂರ್ವ ಶಿಕ್ಷಣದ ಪಠ್ಯಪುಸ್ತಕಗಳ ಮುದ್ರಣ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಏಜೆನ್ಸಿಯಂತೆ ಕಾರ್ಯನಿರ್ವಹಣೆ.

❖ ಇಲಾಖೆ ವಹಿಸುವ ಇನ್ನಿತರ ಮುದ್ರಣ ಕಾರ್ಯಗಳ ನಿರ್ವಹಣೆ

**ಕರ್ನಾಟಕ ಪಠ್ಯಪುಸ್ತಕ ಸಂಘದ ವಿಶೇಷತೆ**

1 ರಿಂದ 10ನೇ ತರಗತಿಯವರೆಗಿನ ಪಠ್ಯಪುಸ್ತಕಗಳನ್ನು ಮುದ್ರಿಸಿ, ವಿದ್ಯಾರ್ಥಿಗಳಿಗೆ ಸರಬರಾಜು ಮಾಡುವ ಗುರುತರವಾದ ಕಾರ್ಯವನ್ನು ನಿರ್ವಹಿಸುತ್ತಿರುವ ಕರ್ನಾಟಕ ಪಠ್ಯಪುಸ್ತಕ ಸಂಘವು ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಮತ್ತು 7 ಮಾಧ್ಯಮಗಳಲ್ಲಿ ಕೋರ್ ವಿಷಯಗಳನ್ನು ಮುದ್ರಿಸಿ ಸರಬರಾಜು ಮಾಡುತ್ತಿದೆ.

❖ ಪ್ರಥಮ ಭಾಷೆ (8) : ಕನ್ನಡ, ಇಂಗ್ಲಿಷ್, ಉರ್ದು, ಮರಾಠಿ, ತೆಲುಗು, ತಮಿಳು, ಹಿಂದಿ ಮತ್ತು ಸಂಸ್ಕೃತ

❖ ದ್ವಿತೀಯ ಭಾಷೆ (2) : ಕನ್ನಡ ಮತ್ತು ಇಂಗ್ಲಿಷ್

❖ ತೃತೀಯ ಭಾಷೆ (10) : ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತ, ತುಳು, ಕೊಂಕಣಿ(ಕನ್ನಡ), ಕೊಂಕಣಿ (ದೇವನಾಗರಿ), ಅರೇಬಿಕ್ ಮತ್ತು ಪರ್ಷಿಯನ್.

❖ ಮಾಧ್ಯಮಗಳು : ಕನ್ನಡ, ಇಂಗ್ಲಿಷ್, ಉರ್ದು, ಮರಾಠಿ, ತಮಿಳು, ತೆಲುಗು ಮತ್ತು ಹಿಂದಿ.

2019–20ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಆಯ್ದ ಸರ್ಕಾರಿ ಕನ್ನಡ ಹಾಗೂ ಉರ್ದು ಮಾಧ್ಯಮ ಶಾಲೆಗಳಲ್ಲಿ ಪ್ರಾರಂಭಿಸಲಾಗಿರುವ ಆಂಗ್ಲ ಮಾಧ್ಯಮ ವಿಭಾಗಗಳಿಗೆ ಎನ್.ಸಿ.ಇ.ಆರ್.ಟಿ (NCERT) ಯ ಗಣಿತ ಮತ್ತು ರಾಜ್ಯ ಪಠ್ಯಕ್ರಮದ ಪರಿಸರ ಅಧ್ಯಯನ ವಿಷಯಗಳನ್ನು ದ್ವಿ-ಭಾಷೆಯಲ್ಲಿ (ಕನ್ನಡ ಮತ್ತು ಇಂಗ್ಲಿಷ್ ಹಾಗೂ ಉರ್ದು ಮತ್ತು ಇಂಗ್ಲಿಷ್) ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ, ಮುದ್ರಿಸುವುದರೊಂದಿಗೆ ಎನ್.ಸಿ.ಇ.ಆರ್.ಟಿ (NCERT) ಯ ಇಂಗ್ಲಿಷ್ ಭಾಷಾ ಪಠ್ಯಪುಸ್ತಕವನ್ನು ಮುದ್ರಿಸಿ ಸರಬರಾಜು ಮಾಡುತ್ತಿದೆ.

ಅಲ್ಲದೆ ಉರ್ದು ಪರಿಚಯ ಭಾಷೆ ಪಠ್ಯಪುಸ್ತಕವನ್ನು ರಚಿಸಲಾಗಿದೆ. 6 ರಿಂದ 10ನೇ ತರಗತಿಯ ಎನ್.ಸಿ.ಇ.ಆರ್.ಟಿ ಗಣಿತ ಮತ್ತು ವಿಜ್ಞಾನ ಪಠ್ಯಪುಸ್ತಕಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುವುದರ ಮೂಲಕ ರಾಜ್ಯದ ಎಲ್ಲಾ ಮಕ್ಕಳು ಆತ್ಮವಿಶ್ವಾಸದಿಂದ ಸ್ಪರ್ಧಾತ್ಮಕ ಯುಗದಲ್ಲಿ ಮುನ್ನಡೆಯಲು ಅವಕಾಶ ಕಲ್ಪಿಸಲಾಗಿದೆ.

❖ 2019–20ನೇ ಶೈಕ್ಷಣಿಕ ಸಾಲಿನಿಂದ ಹಂತ ಹಂತವಾಗಿ ಎಲ್ಲ ವಿಷಯಗಳ ಪಠ್ಯಪುಸ್ತಕಗಳಿಗೆ ವಿಷಯ ಸಂಪದೀಕರಣಕ್ಕಾಗಿ QR ಕೋಡ್ (Quick Response Code) ಅಳವಡಿಸಲಾಗುತ್ತಿದೆ.

❖ ವಿಶೇಷ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪಠ್ಯಪುಸ್ತಕಗಳನ್ನು ಧ್ವನಿಪುಸ್ತಕವಾಗಿ e-pub 3 formatನಲ್ಲಿ ಅಳವಡಿಸಿ ಸಂಘದ ವೆಬ್‌ಸೈಟ್ www.ktbs.gov.in ನಲ್ಲಿ upload ಮಾಡಲಾಗುತ್ತಿದೆ.

❖ 1 ರಿಂದ 10ನೇ ತರಗತಿಯ ಎಲ್ಲ ಶೀರ್ಷಿಕೆಗಳ ಪಠ್ಯಪುಸ್ತಕಗಳನ್ನು ಕರ್ನಾಟಕ ಪಠ್ಯಪುಸ್ತಕ ಸಂಘದ ವೆಬ್‌ಸೈಟ್‌ನಲ್ಲಿ upload ಮಾಡಲಾಗಿದೆ.

ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜು ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವ ಉದ್ದೇಶದಿಂದ 2018–19ನೇ ಶೈಕ್ಷಣಿಕ ಸಾಲಿನಿಂದ SATS (Student Achievement and Tracking System) ತಂತ್ರಾಂಶವನ್ನು ಅಳವಡಿಸಿಕೊಳ್ಳಲಾಗಿದೆ. 2020–21ನೇ ಶೈಕ್ಷಣಿಕ ಸಾಲಿಗೆ ಶಾಲೆಗಳಿಂದ ಪಡೆದ ಪಠ್ಯಪುಸ್ತಕಗಳ ಒಟ್ಟು ಬೇಡಿಕೆಯು 8,20,26,804 ಆಗಿದ್ದು, ಅದರಂತೆ ಮುದ್ರಿಸಿ ಸಕಾಲದಲ್ಲಿ ಸರಬರಾಜು ಮಾಡಲಾಗಿದೆ. ಕೋವಿಡ್–19ರ ವಿಶೇಷ ಸಂದರ್ಭದಲ್ಲಿ ಕಲಿಕೆಯ ಆಕರವಾಗಿ ಪಠ್ಯಪುಸ್ತಕಗಳನ್ನು ಪ್ರತಿ ವಿದ್ಯಾರ್ಥಿಗೆ ನಿಗದಿತ ಕಾಲಾವಧಿಯಲ್ಲಿ ತಲುಪಿಸಿರುವುದು ಕರ್ನಾಟಕ ಪಠ್ಯಪುಸ್ತಕ ಸಂಘದ ಹೆಗ್ಗಳಿಕೆಯಾಗಿದೆ.